

## ಪ್ರಿಯಾಂಕಾ ರೆಡಿ

ಹಾಲಿವುಡ್‌ನಲ್ಲಿ ಕಳೆದ ಎರಡು ತಿಂಗಳಿಂದ ಬ್ಯುಸಿಯಾಗಿರುವ ಪ್ರಿಯಾಂಕಾ ಚೋಪ್ರಾ, ಹೊಸ ಹಿಂದಿ ಚಿತ್ರವೊಂದರಲ್ಲಿ ನಟಿಸಲು ರೆಡಿ ಆಗಿದ್ದಾಳಂತೆ. ಆಕೆ ನಟಿಸುತ್ತಿರುವ ಕ್ವಾಂಟಿಕೋ ಎನ್ನುವ ಟಿ.ವಿ ಸೀರಿಯಲ್ ಅಮೆರಿಕದಲ್ಲಿ ಅತ್ಯಂತ ಜನಪ್ರಿಯವೂ ಹೌದು. ಈ ಸೀರಿಯಲ್‌ನ ಬಹುತೇಕ ಶೂಟಿಂಗ್ ಮಾರ್ಚ್ ಮೊದಲ ವಾರದಲ್ಲಿ ಮುಗಿದಿದೆ. ಜತೆಗೆ ಅಮೆರಿಕ ವಾಸ್ತವ್ಯದ ವೇಳೆಗೆ ಆಕೆ ಎರಡು ಹಾಲಿವುಡ್ ಚಿತ್ರಗಳಲ್ಲೂ ತನ್ನ ಶೂಟಿಂಗ್ ಭಾಗವನ್ನು ಮುಗಿಸಿಕೊಟ್ಟಿದ್ದಾಳೆ. 'ಎ ಕಿಡ್ ಲೈಕ್ ಜೇಕ್' ಮತ್ತು 'ಇಸ್‌ಂಟ್ ಇಟ್ ರೊಮ್ಯಾಂಟಿಕ್' ಎನ್ನುವ ಈಕೆ ನಟಿಸಿರುವ ಎರಡು ಇಂಗ್ಲಿಷ್ ಚಿತ್ರಗಳು ಈ ವರ್ಷ ತೆರೆ ಕಾಣಲಿವೆ.

ಪ್ರಿಯಾಂಕಾ ಈಗ ಅಂತರರಾಷ್ಟ್ರೀಯ ತಾರೆ ಎಂದೇ ಹೆಸರುವಾಸಿ. ಈ ವರ್ಷದ ಆರಂಭದಲ್ಲಿ ಆಕೆ ಲಂಡನ್ನಿನಲ್ಲಿ ಕುಟುಂಬದ ಸದಸ್ಯರ ಜತೆ ಹೊಸ ವರ್ಷ ಆಚರಿಸಿದ್ದಳು. ಅದಕ್ಕೂ ಮುನ್ನ ವಯಾ ಮುಂಬೈ ಲಂಡನ್ನಿಗೆ ತೆರಳುವಾಗ, ಮುಂಬೈಯಲ್ಲಿ ಟಿವಿ ಷೋ ಒಂದರಲ್ಲಿ ಭಾಗವಹಿಸಿದ್ದಳು. ಹಿಂದಿಯಲ್ಲಿ ಆಕೆ ಒಪ್ಪಿಕೊಂಡಿರುವ ಹೊಸ ಸಿನಿಮಾ ರಾಕೇಶ್ ಶರ್ಮಾ ಜೀವನ ಚರಿತ್ರೆ ಆಧರಿಸಿದ್ದು, ಅದು 2019ಕ್ಕೆ ಬಿಡುಗಡೆ ಎಂದು ನಿರ್ಧರಿಸಲಾಗಿತ್ತು. ಹಾಗಾಗಿ ಅದಕ್ಕೂ ಮುನ್ನ ಬೇರೆ ಎರಡು ಹಿಂದಿ ಸಿನಿಮಾಗಳ ಶೂಟಿಂಗ್ ಮುಗಿಯುವ ಅವಕಾಶಗಳಿವೆ. ಎರಡು ಹಿಂದಿ ಚಿತ್ರಗಳ ಚಿತ್ರಕಥೆಯನ್ನು ಈಗಾಗಲೆ ಓದಿ ಪ್ರಿಯಾಂಕಾ ಒಪ್ಪಿಗೆ ಕೊಟ್ಟಾಗಿದೆಯಂತೆ. ಆದರೆ ಅದರಲ್ಲಿ ಮೊದಲು ಯಾವುದು ಶೂಟಿಂಗ್ ಶುರು ಮಾಡುತ್ತದೆ ಎನ್ನುವುದು ಸ್ಪಷ್ಟವಾಗಿಲ್ಲ.

ಪ್ರಿಯಾಂಕಾ ಕೆಲವು ವರ್ಷಗಳ ಹಿಂದೆ ವ್ಯಕ್ತಿಯೊಬ್ಬರ ಜತೆ ಸಂಬಂಧ ಹೊಂದಿದ್ದು, ಶೀಘ್ರವೇ ಆತನನ್ನು ಮದುವೆ ಆಗುತ್ತಾಳೆ ಎಂಬ ಸುದ್ದಿ ಹಬ್ಬಿತ್ತು. ಆದರೆ ಅಮೆರಿಕಕ್ಕೆ ಹೋದ ಬಳಿಕ ಆಕೆ 'ನಾನೀಗ ಸಿಂಗಲ್' ಎಂದು ಇನ್‌ಸ್ಟಾಗ್ರಾಮ್‌ನಲ್ಲಿ ಸ್ಟೇಟಸ್ ಹಾಕಿಕೊಂಡಿದ್ದಳು. ಆಕೆಯ ಅಮ್ಮ 'ಬೇಗ ಮದುವೆಯಾಗು' ಎಂದು ಒತ್ತಾಯಿಸುತ್ತಿದ್ದಾರಂತೆ. ಆದರೆ 'ಸೂಕ್ತ ವರ ಇನ್ನೂ ಸಿಕ್ಕಿಲ್ಲ. ಸಿಕ್ಕಿದರೆ ಮದುವೆಯ ಬಗ್ಗೆ ಯೋಚಿಸಬಹುದು' ಎಂದು ಪ್ರಿಯಾಂಕಾ ಉತ್ತರಿಸಿದ್ದಾಳಂತೆ.

## ಮತ್ತೆ ಬಂದಿದೆ 'ಫೆಸಿಫಿಕ್ ರಿಮ್'



ಭೂಮಿಯ ಮೇಲೆ ದಂಡೆತ್ತಿ ಬರುವ ದೈತ್ಯಕಾಯದ ಶತ್ರುಗಳ ವಿರುದ್ಧ ಹೋರಾಡಿ ಮೂವರು ಪೈಲಟ್‌ಗಳ ನೇತೃತ್ವದ ಸೇನೆಯು ಗೆಲ್ಲುವ ಕಥೆಯ 'ಪೆಸಿಫಿಕ್ ರಿಮ್– ಅಪ್‌ರೈಸಿಂಗ್' ಈ ವಾರ ಬಿಡುಗಡೆಯಾಗುತ್ತಿದೆ. 2013ರಲ್ಲಿ ಬಂದ 'ಫೆಸಿಫಿಕ್ ರಿಮ್' ಇಂಗ್ಲಿಷ್ ಚಿತ್ರದ ಎರಡನೆಯ ಸರಣಿಯಿದು. ಶಾಂತಸಾಗರದ ಆಳದಿಂದ ಮೇಲೆದ್ದ ಕೈಜು ದೈತ್ಯಕಾಯಗಳನ್ನು ಬಗ್ಗು ಬಡಿಯುವ ಸಾಹಸ ಭೂಮಿಯ ಜೀಗರ್‌ಗಳದ್ದು. ನಿರ್ದೇಶಕ ಗುಲೆರ್ಮೊ ಡೆಲ್ ಟೊರೊ ಅವರಿಗೆ ಇದು ಮೊದಲ ಚಿತ್ರವಾದರೂ, ಪೀಟರ್ ಜಿಯಾಂಗ್ ತಂಡದ ವಿಶುಲವ್ ಎಫೆಕ್ಟ್ ದೃಶ್ಯಗಳು ಪ್ರೇಕ್ಷಕರಿಗೆ ರೋಮಾಂಚನ ಹುಟ್ಟಿಸಲಿದೆ ಎನ್ನುವುದು ಟ್ರೇಲರ್ ನೋಡಿದಾಗ ಖಚಿತವಾಗಿದೆ. 150 ದಶಲಕ್ಷ ಡಾಲರ್ ವೆಚ್ಚದಲ್ಲಿ ತಯಾರಾದ ಈ ಚಿತ್ರ 2ಡಿ ಮತ್ತು ತ್ರಿಡಿ ಎರಡೂ ಆವೃತ್ತಿಗಳಲ್ಲಿದೆ. ■ ಬಿಂದು